**ದಿನಾಂಕ: 03-04-2017**
**ಪತ್ರಿಕಾ ಪ್ರಕಟಣೆಗಾಗಿ**

## ತ್ರಾಸಿಯಲ್ಲಿ ನಡೆದ ಮಹಿಳಾ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಯ ಸಂವಾದ ಕಾರ್ಯಕ್ರಮದಲ್ಲಿ ತೀರ್ಮಾನ - ವಲಸೆ ಕಾರ್ಮಿಕರಿಗೆ ಸ್ಥಳ ಹಾಗೂ ಮೂಲಭೂತ ಸೌಕರ್ಯ ಒದಗಿಸಲು ಜಿಲ್ಲಾಧಿಕಾರಿಗಳೊಂದಿಗೆ ಸ್ಥಳೀಯ ಸರ್ಕಾರಗಳ ಚರ್ಚೆ

ತ್ರಾಸಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಂಬೇಡ್ಕರ್ ಸಭಾಭವನದಲ್ಲಿ ಇಂದು 'ಮಕ್ಕಳ ಹಾಗೂ ಮಹಿಳಾ ಹಕ್ಕುಗಳ ರಕ್ಷಣೆಯ ಕುರಿತು ಸಂವಾದ ಕಾರ್ಯಕ್ರಮ'ವು ನಡೆಯಿತು. ಈ ಹಿಂದೆ ಕೊರ್ಗಿಯಲ್ಲಿ ಮಹಿಳಾ ದಿನಾಚರಣೆಯಂದು ಪ್ರಾರಂಭಗೊಂಡ ಸರಣಿ ಕಾರ್ಯಕ್ರಮದ 2ನೇ ಭಾಗ ಇದಾಗಿದ್ದು, ಈ ಕಾರ್ಯಕ್ರಮದಲ್ಲಿ ಕುಂದಾಪುರದ 11 ಗ್ರಾಮ ಪಂಚಾಯತ್‌ಗಳಲ್ಲಿ ಮಕ್ಕಳು, ಮಹಿಳೆಯರು ರಕ್ಷಣೆಯ ವಿಷಯದೊಂದಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳ ಅಗತ್ಯತೆಯನ್ನೂ ಸಹ ಮಂಡಿಸಿ, ಅವುಗಳ ಬಗ್ಗೆ ಕಾರ್ಯಕ್ರದಲ್ಲಿ ಹಾಜರಿದ್ದ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು.

ಕುಂದಾಪುರದ ಹೊಸಾಡು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಟೆಂಟ್ ಹಾಕಿಕೊಂಡು ಸುಮಾರು 20 ವರ್ಷಗಳಿಂದ ವಾಸವಾಗಿದ್ದ ವಲಸೆ ಸಮುದಾಯದವರ ಪರಿಸ್ಥಿತಿಯನ್ನು ಅದೇ ಸಮುದಾಯದ ಬಹದ್ದೂರ್ ಮಕ್ಕಳ ಸಂಘದ ಪ್ರತಿನಿಧಿ ಕುಮಾರ್ ವೀರೇಶ್ ಹಂಚಿಕೊಂಡರು. ಅವರು ಮಾತನಾಡುತ್ತಾ ಅವರು ಎದುರಿಸುವ ಸಮಸ್ಯೆಗಳಲ್ಲಿ ಪ್ರಮುಖವಾಗಿ ಶುದ್ಧ ಕುಡಿಯುವ ನೀರು ಇಲ್ಲದಿರುವುದು, ಶೌಚಾಲಯದ ಸಮಸ್ಯೆ, ವಾಸಕ್ಕೆ ಸೂಕ್ತವಾದ ಜಾಗ ಇಲ್ಲದಿರುವುದು, ಇದರಿಂದಾಗಿ ಆ ಸಮುದಾಯದ ಮಕ್ಕಳ ಹಾಗೂ ಮಹಿಳೆಯರ ರಕ್ಷಣೆಗೆ ಉಂಟಾಗುವ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದವರ ಗಮನ ಸೆಳೆದರು. ಅದಕ್ಕೆ ಪ್ರತಿಕ್ರಿಯೆ ನೀಡಿದ ಹೊಸಾಡು ಗ್ರಾಮ ಪಂಚಾಯತ್‌ನ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪೂಜಾರಿಯವರು, ಹೊಸಾಡು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗ ಇದೆ, ಆ ಬಗ್ಗೆ ಸಿ.ಡಬ್ಲ್ಯೂ.ಸಿ. ಸಂಸ್ಥೆಯ ಸಹಕಾರದೊಂದಿಗೆ ಸಂಬಂಧಪಟ್ಟ ಇಲಾಖೆಯೊಂದಿಗೆ, ಜಿಲ್ಲಾಧಿಕಾರಿಯೊಂದಿಗೆ ವಲಸೆ ಕಾರ್ಮಿಕರಿಗೆ ಸ್ಥಳ ಹಾಗೂ ಇತರ ಮೂಲಭೂತ ಸೌಲಭ್ಯಗಳನ್ನು ಕೊಡುವ ಬಗ್ಗೆ ಚರ್ಚಿಸುವುದಾಗಿ ಭರವಸೆ ನೀಡಿದರು.

ನಾವುಂದ ಗ್ರಾಮ ಪಂಚಾಯತ್‌ನ ಅನ್ನಪೂರ್ಣ ಮಕ್ಕಳ ಸಂಘದ ಪ್ರತಿನಿಧಿಗಳಾದ ರಶ್ಮಿತಾ, ಬಬಿತಾ ಹಾಗೂ ಕಲ್ಪನಾ ಇವರು ವಿವಿಧ ಗ್ರಾಮ ಪಂಚಾಯತ್ ವ್ಯಾಪ್ತಿಯ ಶಾಲೆಗಳಲ್ಲಿ ಇರುವ ಕುಡಿಯುವ ನೀರು ಮತ್ತು ಶೌಚಾಲಯಗಳ ಸಮಸ್ಯೆಗಳ ಬಗ್ಗೆ ಗಮನ ಸೆಳೆದರೆ, ತ್ರಾಸಿ ಗ್ರಾಮ ಪಂಚಾಯತ್ ವ್ಯಾಪ್ತಿಯ ತಂಗಾಳಿ ಮಕ್ಕಳ ಸಂಘದ ಪ್ರತಿನಿಧಿಗಳಾದ ಶ್ರೀರಕ್ಷಾ, ದೀಪ್ತಿ ಮತ್ತು ಸೌಮ್ಯ ವಿವಿಧ ಅಪಾಯಕಾರಿ ವಲಯಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಂಡರು. ಹಕ್ಲಾಡಿಯ ಶ್ರೀ ಮಂಜುನಾಥ ಮಕ್ಕಳ ಸಂಘದ ಪ್ರತಿನಿಧಿ ನವ್ಯದೀಪ ಇವರು ರಸ್ತೆಯನ್ನು ದಾಟುವಾಗ ಸಂಭವಿಸುವ ಅಪಾಯಗಳು, ರಸ್ತೆಯ ಬದಿಯಲ್ಲಿ ದಟ್ಟವಾಗಿ ಬೆಳೆದಿರುವ ಪೊದೆಗಳಿಂದ ಹೆಚ್ಚಾಗಿ ಹೆಣ್ಣುಮಕ್ಕಳಿಗೆ ಆಗಬಹುದಾದ ಅಪಾಯಗಳು, ಬೀದಿನಾಯಿಗಳ ಸಮಸ್ಯೆಗಳಿಂದ ಮಕ್ಕಳಿಗೆ ಆಗುವ ಅಪಾಯಗಳ ಕುರಿತಾಗಿ ಮಾಹಿತಿ ಹಂಚಿಕೊಂಡರು. ಮಕ್ಕಳ ಮಿತ್ರರಾದ ಶ್ರೀಮತಿ ಕವಿತಾ ಗಾಣಿಗ, ಮಹಿಳಾ ಮಿತ್ರರಾದ ರೇಣುಕಾ, ನಯನಾ ಇವರು ಮದ್ಯ ಮಾರಾಟದಿಂದಾಗುವ ಸಮಸ್ಯೆಗಳು, ಕೃತಕವಾಗಿ ಅಥವಾ ನೈಸರ್ಗಿಕವಾಗಿ ಉಂಟಾದ ಮಳೆಗಾಲದಲ್ಲಿ ನೀರಿತುಂಬಿಕೊಂಡು ಅಪಾಯಕಾರಿಯಾಗುವ ಹೊಂಡಗಳು, ಕಲ್ಲಕೋರೆ, ಇಂಗುಗುಂಡಿ ಮುಂತಾದ ಅಪಾಯಕಾರಿ ವಲಯಗಳ ಬಗ್ಗೆ ವಿವರಿಸಿದರು.

ಮದ್ಯ ಮಾರಾಟದ ವಿಷಯಕ್ಕೆ ಪ್ರತಿಕ್ರಿಯಿಸುತ್ತಾ ಗಂಗೊಳ್ಳಿ ಪೋಲಿಸ್ ಠಾಣೆಯ ಆರಕ್ಷಕ ನಿರೀಕ್ಷಕರು ಗಂಗೊಳ್ಳಿ ಠಾಣಾ ವ್ಯಾಪ್ತಿಯಲ್ಲಿ ಯಾವುದೇ ದೂರುಗಳು ಬಂದರೂ ಕೂಡ ನಾವು ಅವರ ಮೇಲೆ ಖಂಡಿತ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂಬ ಭರವಸೆಯನ್ನು ನೀಡಿದರು. ಅಲ್ಲದೇ ಯಾವುದೇ ಮಾಹಿತಿಗಳಿದ್ದರೂ ನಮಗೆ ನೀಡಿ. ಪ್ರತಿಯೊಂದು ಗ್ರಾಮಕ್ಕೆ ಪೊಲೀಸನ್ನು ನೇಮಕ ಮಾಡಲಾಗಿದೆ. ಅವರಿಗೆ ಮಾಹಿತಿ ನೀಡಿ ಎಂದರು.

ಪಂಚಾಯತ್ ರಾಜ್ ವಿಷಯದ ರಾಜ್ಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್. ಜನಾರ್ಧನ್ ಮರವಂತೆ ಇವರು ಪ್ರಾಸ್ತಾವಿಕ ನುಡಿಗಳಲ್ಲಿ ಸಮಾಜದ ದುರ್ಬಲ ವರ್ಗಗಳಾದ ಮಕ್ಕಳು ಹಾಗೂ ಮಹಿಳೆಯರ ರಕ್ಷಣೆಗೆ ಕ್ರಮಗಳನ್ನು ಕೈಗೊಳ್ಳುವುದು ನಮ್ಮೆಲ್ಲರ ಪ್ರಮುಖ ಜವಾಬ್ದಾರಿ. ಪ್ರಜಾಪ್ರಭುತ್ವ ವ್ಯಸ್ಥೆಯಲ್ಲಿ ಜನಭಾಗವಹಿಸುವಿಕೆಯ ಮೂಲಕ ರಚನೆಯಾದ ವಿವಿಧ ಹಂತದ ಸರ್ಕಾರಗಳಲ್ಲಿ ತಳಮಟ್ಟದ ಸರ್ಕಾರವಾದ ಗ್ರಾಮ ಪಂಚಾಯತ್‌ಗಳು ನೇರವಾಗಿ ಜನರೊಂದಿಗೆ ಸಂಪರ್ಕದಲ್ಲಿರುವ ಸರ್ಕಾರವಾಗಿದೆ. ಇಲ್ಲಿ ನಡೆಯುವ ಗ್ರಾಮ ಸಭೆಯು ಮಕ್ಕಳ ಹಾಗೂ ಮಹಿಳೆಯರ ದುರ್ಬಲ ವರ್ಗಗಳು ತಮ್ಮ ಸಮಸ್ಯೆಗಳನ್ನು ವ್ಯಕ್ತಪಡಿಸಲು ಇರುವ ಪ್ರಮುಖ ವೇದಿಕೆಯಾಗಿದೆ. ಈ ಗ್ರಾಮ ಸಭೆಗಳಗೆ ಎಲ್ಲಾ ಹಂತದ ಸರ್ಕಾರಗಳು ಉತ್ತರದಾಯಿಗಳು ಎಂದರು.

ಕುಂದಾಪುರ ತಾಲೂಕು ಪಂಚಾಯತ್ ಸದಸ್ಯರಾದ ಶ್ರೀ ರಾಜು ದೇವಾಡಿಗ ಅವರು ಮಾತನಾಡುತ್ತಾ ಮಕ್ಕಳ ಮತ್ತು ಮಹಿಳೆಯರ ರಕ್ಷಣೆಯ ಕುರಿತಾದ ಯಾವುದೇ ಕ್ರಮ ಕೈಗೊಳ್ಳುವಲ್ಲಿ ತಾಲೂಕು ಪಂಚಾಯತ್‌ನ ಸಹಭಾಗಿತ್ವಕ್ಕೆ ಹಾಗೂ ಸಹಕಾರಕ್ಕೆ ತಾನು ಬದ್ಧರಾಗಿರುವುದಾಗಿ ಭರವಸೆ ನೀಡಿದರು.

ಮರವಂತೆ ಗ್ರಾಮ ಪಂಚಾಯತ್‌ನ ಅಧ್ಯಕ್ಷರೂ ಹಾಗೂ ಮಕ್ಕಳ ಮಿತ್ರರೂ ಆದ ಶ್ರೀಮತಿ ಅನಿತಾ ಆರ್. ಕೆ.ಯವರು ಮಕ್ಕಳ ಹಾಗೂ ಮಹಿಳಾ ಮಿತ್ರರಾಗಿ ಮಕ್ಕಳು ಮತ್ತು ಮಹಿಳೆಯರಿಂದ ಬಂದ ಹಲವಾರು ಸಮಸ್ಯೆಗಳನ್ನು ಈಗಾಗಲೇ ವಿವಿಧ ಇಲಾಖೆಗಳ ಅಧಿಕಾರಿಗಳು, ಸ್ಥಳೀಯ ಸರ್ಕಾರಗಳ ಸಹಭಾಗಿತ್ವದಲ್ಲಿ ಬಗೆಹರಿಸಿದ್ದೇವೆ. ಅಲ್ಲದೇ ಮಕ್ಕಳ ಹಾಗೂ ಮಹಿಳೆಯರ ರಕ್ಷಣೆಯ ಕುರಿತು, ಅವರಿಗೆ ನ್ಯಾಯ ಕೊಡಿಸುವ ಯಾವುದೇ ಹೋರಾಟಕ್ಕೂ ಸಿದ್ಧರಿದ್ದೇವೆ. ಸಮಸ್ಯೆಗಳಾದ ನಂತರ ಅದನ್ನು ಬಗೆಹರಿಸುವುದಕ್ಕಿಂತ ಸಮಸ್ಯೆಗಳಾಗದಂತೆ ನೋಡಿಕೊಳ್ಳುವುದು ಮುಖ್ಯ ಎಂದರು.

ಕಾರ್ಯಕ್ರಮದ ಮುಖ್ಯ ಪರಿಣಾಮಗಳನ್ನು ಹಂಚಿಕೊಂಡ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರಾದ ದಾಮೋದರ ಆಚಾರ್ಯ ಇವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸ್ಥಳೀಯ ಸರ್ಕಾರದ ಪ್ರತಿನಿಧಿಗಳು ಭಾಗವಹಿಸಿ ಸಮಸ್ಯೆಗಳಗೆ ಸ್ಪಂದಿಸಿದ್ದು ಇಂತಹ ಕಾರ್ಯಕ್ರಮಗಳನ್ನು ನಡೆಸಲು ಒಂದು ಆಶಾಭಾವನೆಯನ್ನು ಮೂಡಿಸಿದೆ. ನಾವೆಲ್ಲರೂ ಸೇರಿ ಜಿಲ್ಲಾ ಮಟ್ಟದ ವರೆಗೆ ಇದನ್ನು ಕೊಂಡೊಯ್ದು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಕಾರ್ಯತತ್ಪರರಾಗೋಣ ಎಂದರು.

ಈ ಜಿಲ್ಲೆಯಲ್ಲಿ ಮಕ್ಕಳ ಹಾಗೂ ಮಹಿಳಾ ಹಕ್ಕುಗಳನ್ನು ಎತ್ತಿ ಹಿಡಿಯುತ್ತಿರುವ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ಸಾಧನೆಯನ್ನು ನೆರೆದ ಎಲ್ಲರೂ ಪ್ರಂಶಸಿಸಿದರು. ತಾಲೂಕು ಮಟ್ಟದಲ್ಲಿ ಮಕ್ಕಳು ಮತ್ತು ಮಹಿಳೆಯರ ರಕ್ಷಣೆಯ ಕುರಿತಾಗಿ ಚಿಂತನೆ ನಡೆಸಲು ಹಮ್ಮಿಕೊಂಡ ಈ ಕಾರ್ಯಕ್ರಮವು ಕಾರ್ಯಕ್ರಮದಲ್ಲಿ ಹಾಜರಿದ್ದವರ ಪ್ರಮಾಣವಚನ ಸ್ವೀಕಾರದೊಂದಿಗೆ ಮುಕ್ತಾಯಗೊಂಡಿತು.

ಈ ಕಾರ್ಯಕ್ರಮದಲ್ಲಿ ಪೋಲೀಸ್ ಇಲಾಖೆಯ ಅಧಿಕಾರಿಗಳು, ಮಕ್ಕಳ ಮಹಿಳಾ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು, ತಾಲೂಕು ಪಂಚಾಯತ್ ಸದಸ್ಯರು, ಗ್ರಾಮಪಂಚಾಯತ್‌ಗಳ ಅಧ್ಯಕ್ಷರು, ಸದಸ್ಯರು, ಅಭಿವೃದ್ಧಿ ಅಧಿಕಾರಿಗಳು, ಮಹಿಳಾ ಮಿತ್ರರು ಮಕ್ಕಳ ಮಿತ್ರರು, ಮಕ್ಕಳ ಸಂಘದ ಪ್ರತಿನಿಧಿಗಳು, ಭೀಮಾ ಸಂಘದ ಪ್ರತಿನಿಧಿಗಳು, ಮಾಧ್ಯಮದವರು, ಸಿಡಬ್ಲ್ಯೂಸಿ ಸಂಸ್ಥೆಯ ಕಾರ್ಯಕರ್ತರೂ ಸೇರಿ ಸುಮಾರು 100 ಜನರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಮಕ್ಕಳ ಪ್ರತಿನಿಧಿಗಳಾದ ಧನುಷ್ ಮನಿಶಾ ಹಾಗೂ ಸಿಡಬ್ಲ್ಯೂಸಿ ಕಾರ್ಯಕರ್ತರಾದ ಶ್ರೀನಿವಾಸ ಗಾಣಿಗ ನಿರೂಪಿಸಿದರು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**
ಸುರೇಶ್ ಗೌಡ: 96867377